# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

## ಸತ್ರ ಮೊಕದ್ದಮೆ ಸಂಖ್ಯೆ **20/2022**

| | | |
|---|---|---|
| ಹೆಸರು | ಃ ಮೂರ್ತೆಪ್ಪ ಮಾದರ | ಫ್ರಾಸಾ-01 |
| ತಂದೆಯ ಹೆಸರು | ಃ ಹನುಮಪ್ಪ | ಚಾಸಾ-01 |
| ವಯಸ್ಸು | ಃ 43 ವರ್ಷ | |
| ಉದ್ಯೋಗ | ಃ ಕೂಲಿ ಕೆಲಸ | |
| ವಿಳಾಸ | ಃ ಕೆಸರಭಾವಿ, (ಮಹಾಂತಪುರ)<br>ತಾಃ ಇಳಕಲ್ಲ | |

ದಿಃ 04-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದ

ನಾನು ಇಳಕಲ್ಲಿನ ಮಹೇಶ ಹಾರ್ಡವೇರ್ ಅಂಗಡಿಯಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾವು ಐದು ಜನ ಅಣ್ಣ ತಮ್ಮಂದಿರು ಇರುತ್ತೇವೆ. ಮೃತ ಶಾಂತಪ್ಪ ನನ್ನ ಅಣ್ಣ ಇರುತ್ತಾನೆ. 2 ನೇ ಆರೋಪಿ ಶಾಂತಪ್ಪನ ಹೆಂಡತಿ ಇರುತ್ತಾಳೆ. ಶಾಂತಪ್ಪನ ಮದುವೆ 2 ನೇ ಆರೋಪಿತಳೊಂದಿಗೆ 20 ವರ್ಷದ ಹಿಂದೆ ಆಗಿರುತ್ತದೆ. ಇವರಿಗೆ ಇಬ್ಬರು ಜನ ಮಕ್ಕಳು ಚಾಸಾ-10 ಆಕಾಶ ಮತ್ತು ಚಾಸಾ-11 ಅಕ್ಷತಾ ಇರುತ್ತಾರೆ.

ಮೊದಲು ಶಾಂತಪ್ಪ ಮತ್ತು ಅವನ ಹೆಂಡತಿ ಮಕ್ಕಳು ಗೋವಾದಲ್ಲಿ ದುಡಿಯಲು ಇದ್ದರು. 1 ನೇ ಆರೋಪಿ ಬಸವರಾಜ ಮಾದರ ನನ್ನ ಅಳಿಯ ಇರುತ್ತಾನೆ. ಇವನೂ ಸಹ ಗೋವಾದಲ್ಲಿ ಇರುತ್ತಿದ್ದ. 1 ನೇ ಆರೋಪಿ ಬಸವರಾಜ ಇತನಿಗೂ ಮತ್ತು 2 ನೇ ಆರೋಪಿ ಹುಲಗವ್ವ ಇವರ ಮಧ್ಯೆ ಅನೈತಿಕ ಸಂಬಂಧ ಇರುತ್ತದೆ ಅಂತಾ ಸುದ್ದಿಯಾಯಿತು. ನಾನು, ಚಾಸಾ-12 ಮಹಾಂತೇಶ, ಚಾಸಾ-13 ಬಸಪ್ಪ, ಚಾಸಾ-25 ಗಂಗಪ್ಪ ಎಲ್ಲರೂ ಸೇರಿ ಅವರಿಗೆ ಬುದ್ಧಿವಾದ ಹೇಳಿದೆವು. ಆಗ 1 ನೇ ಆರೋಪಿ ಬಸವರಾಜ ಇನ್ನು ಮುಂದೆ ಸರಿಯಾಗಿ ಇರುತ್ತೇನೆ ಅಂತಾ ನಮ್ಮ ಹತ್ತಿರ ಒಪ್ಪಿಕೊಂಡ. ಆದರೂ ಸಹಿತ 1 ನೇ ಆರೋಪಿ ತನ್ನ ನಡವಳಿಯನ್ನು ಸುಧಾರಿಸಿಕೊಳ್ಳಲಿಲ್ಲ ಅನೈತಿಕ ಸಂಬಂಧವನ್ನು ಮುಂದುವರೆಸಿಕೊಂಡು ಹೋದನು. ಅಂದಾಜು ಎರಡು ವರ್ಷಗಳ ಹಿಂದೆ ನನ್ನ ಸಹೋದರ ಶಾಂತಪ್ಪ ತನ್ನ ಹೆಂಡತಿ ಹಾಗೂ ಮಗಳನ್ನು ಕರೆದುಕೊಂಡು ನಮ್ಮ ಊರಿಗೆ ಬಂದ. ತಗಡಿನ ಶೆಡ್ಡಿನಲ್ಲಿ ವಾಸ

ಮಾಡಲು ಪ್ರಾರಂಭಿಸಿದರು. ಅವನ ಮಗನಿಗೆ ಶಾಲೆ ಇರುತ್ತದೆ ಅಂತಾ ಹೇಳಿ ಅವನು ಗೋವಾದಲ್ಲಿಯೇ ಅವನ ಅಜ್ಜ ಅಜ್ಜಿಯ ಮನೆಯಲ್ಲಿ ಉಳಿದನು. ಕೆಲವು ದಿನ ಆದ ನಂತರ 1 ನೇ ಆರೋಪಿ ಬಸವರಾಜ ಈತನೂ ಕೂಡ ನಮ್ಮ ಊರಿಗೆ ಬಂದನು. ನಮ್ಮ ಊರಿಗೆ ಬಂದ ನಂತರವೂ ಸಹಿತ ಆತನು ಅನೈತಿಕ ಸಂಬಂಧವನ್ನು ಮುಂದುವರೆಸಿದನು. ಆಗ ನನ್ನ ಅಣ್ಣ ಶಾಂತಪ್ಪ ತನ್ನ ಹೆಂಡತಿಗೆ ಬೈದು ಬುದ್ಧಿ ಹೇಳಿದನು.

ಅಂದಾಜು ಒಂದೂವರೆ ವರ್ಷದ ಹಿಂದೆ ನನ್ನ ಅಣ್ಣ ಶಾಂತಪ್ಪ ಕಾಣೆಯಾದನು. ನಾನು ಹೋಗಿ 2 ನೇ ಆರೋಪಿತಳಾದ ಹುಲಗವ್ವ ಇವಳಿಗೆ ಶಾಂತಪ್ಪನನ್ನು ಕುರಿತು ಕೇಳಿದೆನು. ಆಗ ಅವಳು ನನ್ನ ಮುಂದೆ ಚಾಪೆ, ತಲೆದಿಂಬು, ಚಾದರ ತೆಗೆದುಕೊಂಡು ಕೆಲಸಕ್ಕೆ ಹೋಗಿರುತ್ತಾನೆ ಅಂತಾ ಹೇಳಿದಳು. ನಂತರ ನಮ್ಮ ಅಣ್ಣನನ್ನು ಕುರಿತು ಆ ಕಡೆ ಈ ಕಡೆ ಹುಡುಕಾಡಿದೆವು. ಗೋವಾದ ಸಂಬಂಧಿಕರಿಗೂ ಸಹ ಫೋನ್ ಮಾಡಿ ವಿಚಾರಿಸಿದೆವು. ಶಾಂತಪ್ಪನ ಫೋನಿಗೆ ಫೋನ್ ಮಾಡಿದಾಗ ಅದು ಸ್ವಿಚ್ ಆಫ್ ಆಗಿರುವುದು ಕಂಡು ಬಂದಿತು. ನಂತರ 2 ನೇ ಆರೋಪಿತಳು ಅವಳ ಗಂಡ ಕಾಣೆಯಾಗಿರುತ್ತಾನೆ ಅಂತಾ ಪೊಲೀಸರಿಗೆ ದೂರು ಕೊಟ್ಟಳು. ನನಗೆ 1 ಮತ್ತು 2 ನೇ ಆರೋಪಿತರ ಮೇಲೆ ಸಂಶಯ ಬರಲು ಪ್ರಾರಂಭವಾಯಿತು. ಒಂದು ವಾರದ ನಂತರ ಪೊಲೀಸ್ ಠಾಣೆಗೆ ಹೋಗಿ 1 ಮತ್ತು 2 ನೇ ಆರೋಪಿತರ ಮೇಲೆ ಬಲವಾದ ಸಂಶಯ ಇರುತ್ತದೆ ಅಂತಾ ದೂರು ಕೊಟ್ಟೆನು. ಈ ದೂರು ನಿಪಿ.1 ರಲ್ಲಿದ್ದು ಅದರಲ್ಲಿರುವ ನನ್ನ ಸಹಿ ನಿಪಿ.1(ಎ) ದಲ್ಲಿದೆ.

ಈ ದೂರು ಕೊಟ್ಟ ನಂತರ ಪೊಲೀಸರು ನಮ್ಮ ಊರಿಗೆ ಬಂದು ವಿಚಾರಣೆ ಮಾಡಿ ಸದರಿ ತಗಡಿನ ಶೆಡ್ಡಿನಲ್ಲಿ ಪಂಚನಾಮೆ ಮಾಡಿದರು. ಆ ಕಾಲಕ್ಕೆ ಒಂದು ಫೋಟೋ ತೆಗೆದರು. ಸದರಿ ಫೋಟೋ ನಿಪಿ.2 ರಲ್ಲಿದೆ. ಎರಡು ದಿನ ಆದ ನಂತರ ಪೊಲೀಸರು 1 ಮತ್ತು 2 ನೇ ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ಹೋದರು. ನಾನು ಕೂಡ ಪೊಲೀಸ್ ಠಾಣೆಗೆ ಹೋದೆನು. ಐದೂ ಜನ ಆರೋಪಿತರನ್ನು ಪೊಲೀಸ್ ಠಾಣೆಯಲ್ಲಿ ಕೂರಿಸಿದ್ದರು. ಈ ಐದೂ ಜನರು ಕೃತ್ಯದಲ್ಲಿ ಭಾಗಿಯಾಗಿರುತ್ತಾರೆ ಅಂತಾ ಪೊಲೀಸರು ನನ್ನ ಮುಂದೆ ಹೇಳಿದರು. ಆ ನಂತರ ನಾನು ಮನೆಗೆ ಬಂದು ಶಾಂತಪ್ಪನ ಮಗಳಾದ ಚಾಸಾ-11 ಇವಳಿಗೆ ವಿಚಾರಿಸಿದಾಗ

ಅವಳು ನನ್ನ ಮುಂದೆ ಐದೂ ಜನರು ಅವಳ ತಂದೆಯನ್ನು ಕೊಲೆ ಮಾಡಿರುತ್ತಾರೆ ಅಂತಾ ಹೇಳಿದಳು. 2 ನೇ ಆರೋಪಿತಳು ಬೆದರಿಕೆ ಹಾಕಿದ್ದರಿಂದ ವಿಷಯವನ್ನು ಬೇರೆಯವರ ಮುಂದೆ ಹೇಳಿರುವುದಿಲ್ಲ ಅಂತಾ ನಮ್ಮ ಮುಂದೆ ಹೇಳಿದಳು. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಐದೂ ಜನರನ್ನು ನಾನು ಪೊಲೀಸ್ ಠಾಣೆಯಲ್ಲಿ ನೋಡಿದ್ದು ಅವರು ಈಗ ನ್ಯಾಯಾಲಯದ ಮುಂದೆ ಹಾಜರಿದ್ದು ಅವರನ್ನು ಗುರುತಿಸುತ್ತಿದ್ದು ಅವರು ಈ ಪ್ರಕರಣದ ಆರೋಪಿತರೇ ಇರುತ್ತಾರೆ. 3 ನೇ ಆರೋಪಿ ನಿಂಗಪ್ಪ ಕೂಡ ನಮ್ಮ ಊರಿನವನು ಇರುತ್ತಾನೆ. 4 ಮತ್ತು 5 ನೇ ಆರೋಪಿತರು ತುಂಬ ಗ್ರಾಮದವರು ಇರುತ್ತಾರೆ.

(ಆರೋಪಿ ಪರ ವಕೀಲರು ಸಾಕ್ಷಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಯಾವುದೇ ಸಕಾರಣವಿಲ್ಲವೆಂದು ಅವರ ಮನವಿಯನ್ನು ತಳ್ಳಿ ಹಾಕಲಾಯಿತು ಮತ್ತು ಸಾಕ್ಷಿ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.